ಒಂದಾಣೆ ಮಾಲೆ. 129

ಮಕ್ಕಳ ಪದ್ಯಗಳು

(ದ್ವಿತೀಯ ಮುದ್ರಣ)



ರಚಯಿತರು: ಶ್ರೀ। ಅಮ್ಮೆಂಬಳ ಅನಂತಯ್ಯ ನಾವಡ, ವಿದ್ವಾನ್,
ಮಂಗಳೂರು.

1960 ಬೆಲೆ: ಆಣೆ ೧.

ಒಂದಾಣೆ ಮಾಲೆ — ಮಂಗಳೂರು.

ಮಕ್ಕಳ ಪದ್ಯಗಳು

ಪ್ರಾರ್ಥನೆ

ದೇವ! ನಿನ್ನ ಚರಣಗಳಿಗೆ
ಬಾಗಿ ನಮಿಪೆವು ।
ಈವುದೆಮಗೆ ಸನ್ಮತಿಯನು
ಹಾಡಿ ನುತಿಪೆವು ।
ಮೂಢ ಬುದ್ಧಿ ಮಾಯವಾಗಿ
ಜ್ಞಾನ ಬೆಳಗಲಿ ।
ಗಾಢವಾಗಿ ಸರ್ವರೊಳಗೆ
ಸ್ನೇಹ ಬೆಳೆಯಲಿ ॥

ವಿದ್ಯೆ

ವಿದ್ಯೆಯೇ ಮಾನವನ ರೂಪ ಸಂಪತ್ತು ।
ವಿದ್ಯೆಯಿಲ್ಲದವಂಗೆ ತಪ್ಪದು ವಿಪತ್ತು ।
ಭೋಗ ಭಾಗ್ಯಗಳೆಲ್ಲ ವಿದ್ಯೆಯಾಧೀನ ।
ತ್ಯಾಗಬುದ್ಧಿಗೆ ಹೇತು ವಿದ್ಯೆಯೇ ಜಾಣ ।
ಪರದೇಶ ಗಮನದಲಿ ವಿದ್ಯೆಯೇ ಬಂಧು ।
ವರ ವಿದ್ಯೆ ಪಡೆದವನು ಸುಜ್ಞಾನ ಸಿಂಧು ।
ರಾಜಸನ್ಮಾನವನು ವಿದ್ಯೆ ಪಡೆಯುವುದು ।
ಈ ಜಗದೊಳದಕೆ ಸಮವಿನ್ನೊಂದು ಸಿಗದು ।
ವಿದ್ಯೆಯಿಲ್ಲದ ನರನು ಪಶುಗಳಿಗೆ ಸಮನು ।
ವಿದ್ವಾಂಸನಾದವನು ದೇವನಿಗೆ ಸಮನು ॥

ನಾನೂ ಗಾಂಧೀ ಆಗುವೆನು !

ನಾನೂ ಗಾಂಧೀ ಆಗುವೆನು ।
ಖಾದೀ ವಸ್ತ್ರವ ಉಟ್ಕೊಂಡು । ಕೈಯಲಿ ದಂಟಿಯು ಹಿಡ್ಕೊಂಡು
ಕಣ್ಣಿಗೆ ಕನ್ನಡಿ ಇಟ್ಕೊಂಡು । ನಾನೂ ಗಾಂಧೀ ಆಗುವೆನು ।
ಸತ್ಯದ ಮಾತನು ಸಾರುತ್ತ । ನಿತ್ಯದ ಪ್ರಾರ್ಥನೆ ಮಾಡುತ್ತ
ಕೃತ್ಯದಿ ಸುಖವನು ತೋರುತ್ತ । ನಾನೂ ಗಾಂಧೀ ಆಗುವೆನು !
ಹಿಂದುಗಳೆಲ್ಲರ ಐಕ್ಯವನು । ಹರಿಜನ ಸಂಘದ ಸೇವೆಯನು
ದೇಶದ ಹಿತವನು ಬಯಸುವೆನು । ನಾನೂ ಗಾಂಧೀ ಆಗುವೆನು ।
ಚರಖದಿ ನೂಲನು ತೆಗೆಯುವೆನು । ಶಾಂತಿ ಅಹಿಂಸೆಯ ತಾಳುವೆನು ।
ಭಾರತ ಹಿತವನು ಬಯಸುವೆನು । ದೇಶಕೆ ನಾ ಬಲಿಯಾಗುವೆನು ।
ನಾನೂ ಗಾಂಧೀ ಆಗುವೆನು ।

ಮಾತೆಯ ಪ್ರೀತಿಯ ಪುತ್ರ

ಕೈಹಿಡಿದು ಕುರುಡರನು ಯಾರು ನಡೆಸುವನೋ
ಅಳುವವರ ಕಣ್ಣೀರ ಯಾರು ಒರಸುವನೋ
ಬಡವರಾ ಕಷ್ಟವನು ಯಾರು ನೀಗುವನೋ
ಅಬಲರಿಗೆ ಬಲವನ್ನು ಯಾರು ನೀಡುವನೋ
ರೋಗಾರ್ತರಿಗೆ ಯಾರು ಆಧಾರವಹನೋ
ಶರಣುಬಂದಿಹ ಜನರ ಯಾರು ಕಾಯುವನೋ
ಪ್ರಾಣಿಹಿಂಸೆಯ ಯಾರು ತಡೆದು ನಿಲ್ಲಿಪನೋ
ಮಾನಿನಿಯ ಮಾನವನು ಯಾರು ರಕ್ಷಿಪನೋ
ಸರ್ವದಾ ಸತ್ಯವನು ಯಾರು ಹೇಳುವನೋ
ಸೇವೆಯೇ ಧರ್ಮವೆಂದಾರು ತಿಳಿಯುವನೋ
ದೇಶಸೇವೆಗೆ ಯಾರು ತನುವ ನೀಡುವನೋ
ಈಶನನು ಭಕ್ತಿಯಿಂದಾರು ಪೂಜಿಪನೋ
ಜನ್ಮದಾತೆಯ ಭಾಗ್ಯವರ್ಧಕನು ಅವನು!
ಭರತಮಾತೆಯ ಸುತನು। ಸತ್ಯಸೇವಕನು।

ಚಂದದ ಖಾದಿ

ಹಿಂದೂದೇಶದ ಸ್ವಾತಂತ್ರ್ಯಲಾಭಕ್ಕೆ
ಚಂದದ ಖಾದಿಯೆ ಕಾರಣವು ।
ಸಂದೇಹವಿಲ್ಲಯ್ಯ । ಪರದೇಶಿ ವಸ್ತ್ರವು
ದೇಶದ ಬಹುಸುಖ ನಾಶಕವು :
ಚರಖ-ತಕಲಿಗಳ ಗರಗರ ತಿರುಗಿಸಿ
ಸರ ಸರ ನೂಲನ್ನು ತೆಗೆಯುವೆವು ।
ವರ ಮಾತೃಭೂಮಿಯ ಗೀತೆಯ ಪಾಡುತ್ತ
ಪರ ತರ ಸುಖವನು ಪಡೆಯುವೆವು ।
ಹತ್ತಿಯ ಬೆಳೆಸುತ ನೂಲನ್ನು ತೆಗೆಯುತ್ತ
ಉತ್ತಮ ವಸ್ತ್ರವ ನೇಯುವೆವು ।
ಸತ್ಯಾತ್ಮರಾಗುತ್ತ ಖಾದಿಯ ಧರಿಸುತ್ತ
ನಿತ್ಯ ಸ್ವಾತಂತ್ರ್ಯದಿ ಸುಖಿಸುವೆವು ।
ಗಾಂಧಿ ಮಹಾತ್ಮನು ತೋರಿದ ಪಥವಿದು
ಸುಂದರ ಸತ್ಫಲ ಕೊಡುತಲಿದೆ ।
ವಂದ್ಯ ಬಾಪೂಜಿಯ ತತ್ವವು ಲೋಕದಿ
ಕುಂದದ ಯಶವನು ಗಳಿಸುತಿದೆ ।

ಹುಣ್ಣಿಮೆಯ ಚಂದ್ರ

ನೀಲವಾದ ಗಗನದಲ್ಲಿ ತಾರೆಗಳ ಸಮೂಹದಲ್ಲಿ
ಹುಣ್ಣಿಮೆಯಾ ಸಂಜೆಯಲ್ಲಿ ಮೂಡಣ ದಿಗಂತದಲ್ಲಿ
ಶೋಭಿಸುವನು ಚಂದ್ರನು । ಶುಭ್ರಕಿರಣಸಾಂದ್ರನು ।
ಉದ್ದು ಮೆಂತೆ ದೋಸೆಯಂತೆ ದೊಡ್ಡ ಬೆಣ್ಣೆ ಮುದ್ದೆಯಂತೆ
ಹೊಳೆವ ಬೆಳ್ಳಿ ತಟ್ಟೆಯಂತೆ ನಭದ ಅರಳು ಹೂವಿನಂತೆ
ಶೋಭಿಸುವನು ಚಂದ್ರನು । ಶುಭ್ರಕಿರಣ ಸಾಂದ್ರನು ।

ವಿಶ್ವದೆಲ್ಲ ಕಡೆಗಳಲ್ಲಿ ಹಾಲು ಸುರಿವ ರೀತಿಯಲ್ಲಿ
ಹಿಟ್ಟು ಹರಡುವಂದದಲ್ಲಿ ತಿಂಗಳ ಬೆಳಕನ್ನು ಚೆಲ್ಲಿ
ಅಮೃತ ರಸವ ಸುರಿವನು । ಜನರ ಮನವ ತಣಿಪನು ।
ಶತ್ರು ಮಿತ್ರ ಭೇದವಿಲ್ಲ । ಅವನ ಬೆಳಕು ಸಮವು ಎಲ್ಲ ।
ಸ್ವಾರ್ಥದಲ್ಲಿ ಆಶೆಯಿಲ್ಲ । ಲೋಕಸುಖವೆ ತನ್ನದೆಲ್ಲ ।
ಅವನೆ ಪೂರ್ಣ ಚಂದ್ರನು । ಆಗಸದ ಸುರೇಂದ್ರನು ।

ಒಳ್ಳೆಯ ಹುಡುಗರು

ಒಳ್ಳೆಯ ಹುಡುಗರು ಬೆಳಗ್ಗೆ ಎದ್ದು । ಪಾಠಗಳೆಲ್ಲವ ಓದುವರು ।
ಊಟವ ತೀರಿಸಿ ಪುಸ್ತಕ ಹಿಡಿದು । ಶಾಲೆಗೆ ಬೇಗನೆ ಹೋಗುವರು ।
ಸ್ನೇಹಿತರೊಂದಿಗೆ ಕೂಡುತ ನಲಿಯುತ । ಓದಲು ಬರೆಯಲು ಕಲಿಯುವರು ।
ವಿನಯವಿಧೇಯತೆಯಿಂದಲಿ ಸತತ । ವಿದ್ಯಾಭ್ಯಾಸವ ಮಾಡುವರು ।
ಪಾಠವನೋದುತ ಆಟವನಾಡುತ । ದಿನ ದಿನ ವೃದ್ಧಿಯ ಹೊಂದುವರು ।
ಎಲ್ಲರ ಪ್ರೇಮವ ಗಳಿಸುತ ಮೆರೆಯುತ । ಉತ್ತಮ ಪಂಡಿತರಾಗುವರು ।

ಅಭಿವೃದ್ಧಿಯ ದಾರಿ!

ಭಾರತ ಮಾತೆಯ ಪ್ರೀತಿಯ ಪುತ್ರರೆ । ದೇಶೋದ್ಧಾರವ ಸಾಧಿಸಿರಿ ।
ಜವಹರಲಾಲರ ತೆರದಲಿ ವಿಶ್ವದಿ । ಮಧುರ ಸ್ನೇಹವ ತೋರಿಸಿರಿ ।
ಸಾಹಸವೀರ ಸುಭಾಸರ ತೆರದಲಿ । ವೀರ ಶಿವಾಜಿಯ ರೀತಿಯಲಿ
ಧೈರ್ಯವ ತೋರುತ ಸಮರಾಂಗಣದಲಿ । ಹೋರಾಡಿರಿ ಬಲು ಶೌರ್ಯದಲಿ ।
ರಾಘವನಂದದಿ ದುಷ್ಟರ ತರಿದು । ಶಿಷ್ಟರ ಕುಲವನು ರಕ್ಷಿಸಿರಿ ।
ದಾನಶೂರ ಶಿಬಿಕರ್ಣರ ತೆರದಲಿ । ತ್ಯಾಗಬುದ್ಧಿಯನು ತೋರಿಸಿರಿ ।
ಪಂಪರನ್ನ ಕವಿವರ್ಯರ ತೆರದಲಿ । ಜ್ಞಾನಪ್ರಕಾಶವ ಹರಡಿಸಿರಿ ।
ಗಾಂಧಿಮಹಾತ್ಮಾಬುದ್ಧರ ತೆರದಲಿ । ಸತ್ಯಾಹಿಂಸೆಯ ಪಾಲಿಸಿರಿ ।

ದೇಶದ ಸೇವೆಯ ಮಾಡುತ ಮುದದಲಿ । ಆತ್ಮಾರ್ಪಣವನ್ನೆಸಗುತಲಿ–
ಭಾರತಮಾತೆಯ ಕಂಠಾಭರಣದ । ಉಜ್ವಲರತ್ನಗಳೆನ್ನಿಸಿರಿ ।

ನೆಹರು ಜಯಘೋಷ! (ಮಾರ್ಚಿಂಗ್ ಸೋಂಗ್)

ವೀರನೆಹರು । ಜಯ । ಜಯ । ಜಯ । ವಿಶ್ವಬಂಧು । ಜಯ । ಜಯ ।
ಭಾರತದ ವೀರ ಪುತ್ರ । ಬಾಲಮಿತ್ರ । ಜಯ । ಜಯ ।
ಜವಾಹಿರನೆ । ಜಯ । ಜಯ ।

ಸತ್ಯಮೂರ್ತಿ ಗಾಂಧಿಯವರ ಪ್ರೀತಿಪಾತ್ರ ಶಿಷ್ಯನೆ ।
ನಿತ್ಯಶಾಂತಿ ಸುಖವನೆಲ್ಲ ನೀಡುವ ಮಹಾತ್ಮನೆ ।
ಸ್ನೇಹಮಧುರಶೀಲನೆ ।

ವಿಶ್ವಜನರ ಪ್ರೇಮಸಖನೆ । ವಿಶ್ವಶಾಂತಿ ದೂತನೆ ।
ವಿಶ್ವಯುದ್ಧವನ್ನು ನಗೆಯಮಾತಿನಿಂದ ತಡೆವನೆ ।
ನಿತ್ಯಶುದ್ಧ ಚರಿತನೆ ।

ಎಳೆಯ ಮಕ್ಕಳೆಲ್ಲ ನಾವು ಕೂಡಿ ನಿನ್ನ ಪೊಗಳ್ವೆವು ।
ಗೆಳೆಯನಾಗಿ ಬಾಳಲೆಂದು ಮನದಿ ಆಶೆಗೈವೆವು ।
ದೇವನನ್ನು ನುತಿಪೆವು ।

ಭಾರತಮಾತೆಯ ವರಪುತ್ರ

ಜವಹರಲಾಲನೆಹರುಗಳು । ಹಿಂದೂದೇಶದ ಮಂತ್ರಿಗಳು ।
ವಿಶ್ವದಿ ಶಾಂತಿಯ ಹರಡುವರು । ಸುಖಸಂತೋಷವ ನೀಡುವರು ।
"ಹಿಂಸೆಯು ಸಲ್ಲದು" ಎನ್ನುವರು । ಸ್ನೇಹದ ಮಂತ್ರವ ಸಾರುವರು ।
ದೇಶದ ಸುಖವನು ಬಯಸುವರು । ದ್ವೇಷಾಸೂಯೆಯ ಬಿಟ್ಟಿಹರು ।
ಭಾರತ ಭಾಗ್ಯದ ಸಾಧಕರು । ಭಾರತಮಾತೆಯ ವರಸುತರು ।

ಗಾಂಧೀ ಗೀತೆ!

ದೇಶಪ್ರೇಮದ ಮಂತ್ರದಿ ನಮ್ಮನು । ಎಚ್ಚರಿಸಿದ ಗಾಂಧೀ ।
ಸತ್ಯಾಹಿಂಸಾ ಬಲದಲಿ ಭಯವನು । ತೊಲಗಿಸಿದನು ಗಾಂಧೀ ।
ಪರದೇಶಿಗಳನು ಓಡಿಸಿ, ದೇಶವ । ಉದ್ಧರಿಸಿದ ಗಾಂಧೀ ।
ಸ್ವತಂತ್ರ ಸೂರ್ಯನ ಕಿರಣದಿ ಜನತೆಯ । ಬೆಳಗಿಸಿದನು ಗಾಂಧೀ ।
ಆಕಾಶದಿ ಧ್ರುವತಾರೆಯ ರೂಪದಿ । ಬೆಳಗುತಲಿರುವನು ಗಾಂಧೀ ।
ಸ್ವಾತಂತ್ರ್ಯೋತ್ಸವ ಸಮಯದಿ ನಮ್ಮನು । ಹರಸುತಲಿರುವನು ಗಾಂಧೀ ।

ಹಿಂದೂದೇಶ ನಮ್ಮದು (ಮಾರ್ಚಿಂಗ್ ಸೋಂಗ್)

ಹಿಂದೂದೇಶ ನಮ್ಮದು । ಹಿಂದೂದೇಶ ನಮ್ಮದು ।
ಸುಂದರ ಸ್ವತಂತ್ರ ಪೂರ್ಣ ಹಿಂದೂದೇಶ ನಮ್ಮದು ।
ಇದಕೆ ಸುಖವು ತಪ್ಪದು ।

ಸತ್ಯಮೂರ್ತಿ ಗಾಂಧಿದೇವ ಕೃತ್ಯವಿಂದು ಫಲಿಸುತ ।
ನಿತ್ಯಶಾಂತಿ ಸುಖವನೀಗ ಜನತೆಗಾಗಿ ನೀಡುತ
ಸಫಲವಾಯ್ತು ಮೆರೆಯುತ ।

ವಿಜಯದೂತ ಭಾಗ್ಯದಾತ ಗಾಂಧಿಯ ಸ್ವರಾಜ್ಯವು ।
ಪ್ರಜಾರಾಜ್ಯ ಸುಖವ ಪಡೆದು ಅಸಮತೋಷಗಳಿಸಿತು ।
ವಿಷಮದುಃಖ ಹೋಯಿತು ।

ನೆಹರು ನಾಯಕತ್ವದಲ್ಲಿ ನಮ್ಮ ದೇಶ ನಂದನ ।
ಮಿಹಿರ ಕಿರಣದಂತೆ ಹರಡಿತೆಲ್ಲ ಸುಖದ ಚಂದನ ।
ಸುದಿನವಾಯ್ತು ಈ ದಿನ ।

ವನಮಹೋತ್ಸವ (ಮಾರ್ಚಿಂಗ್ ಸೋಂಗ್)

ಬೀಜವನ್ನು ಬಿತ್ತುವ । ಗಿಡಗಳನ್ನು ಬೆಳೆಸುವ ।
ಸುಜಲಭರಿತದೇಶವನ್ನು ಸುಫಲವಾಗಿ ಮಾಡುವ ।
ತೆಂಗು ಕಂಗು ಸಸಿಗಳ ತಾಳೆ ಬಾಳೆ ಮರಗಳ ।
ಭಂಗವಿಲ್ಲದಂತೆ ಬೆಳೆಸಿ ಅಧಿಕ ಫಲವ ಪಡೆಯುವ ।
ಮಾವು ಹಲಸು ನೇರಳೆ ಲಿಂಬೆ ದ್ರಾಕ್ಷೆ ಪೇರಳೆ ।
ಸೇಬು ಚಿಕ್ಕು ಕಿತ್ತಳೆಗಳ ನಾವು ನಾವೆ ಬೆಳೆಸುವ ।
ಬದನೆ ಸೌತೆ ಕುಂಬಳ ಹೀರೆಕಾಯಿ ಪಡುವಲ ।
ಮುಂದದಿ ನಾವು ಗೆಣಸು ಮೆಣಸು ಹರಿವೆಗಳನು ಬೆಳೆಸುವ ।
ವಿವಿಧ ಧಾನ್ಯ ಬೆಳೆಗಳ ಕಾಯಿಪಲ್ಯ ಸಸಿಗಳ ।
ಸುವಿಧ ರೀತಿಯಲ್ಲಿ ಬೆಳೆಸಿ ಅಧಿಕ ಫಲವ ಪಡೆಯುವ ।
ಅಧಿಕವಾಗಿ ಬಿತ್ತುವ । ಅಧಿಕವಾಗಿ ಬೆಳೆಸುವ ।
ಅಧಿಕ ಫಲವ ಪಡೆಯುತೆಲ್ಲ ತೃಪ್ತಿಯಿಂದ ಬಾಳುವ
ದೇಶವು ಸ್ವತಂತ್ರವು । ಅನ್ನವು ಸ್ವತಂತ್ರವು ।
ಈಶದಯದಿ ನಿತ್ಯ ಸುಖವ ಪಡೆದು ನಾವು ಮೆರೆಯುವ ।

ಚುಟುಕಗಳು

ನಮ್ಮ ಮನೆಯ ಬಿಲ್ಲಿ । ಮಡಿಕೆ ಮೊಸರು ಚೆಲ್ಲಿ ।
ಅಮ್ಮನಿಂದ । ಪೆಟ್ಟುತಿಂದು । ಓಡಿತಲ್ಲಿ ಬಿಲ್ಲಿ ॥ ೧ ॥
ಮರದಲಿದ್ದ ಗಿಳಿ । ತಿನ್ನುತಿತ್ತು ಹುಳಿ ।
ಕುಂಟ ಸಿದ್ಧ । ನೋಡುತಿದ್ದ । ಮಾಡಿ ಕಣ್ಣು ಪಿಳಿ ॥ ೨ ॥
ಚಿಕ್ಕ ಹುಡುಗ ಮುದ್ದು । ಕದ್ದ ಗದ್ದೆ ಉದ್ದು ।
ರೈತ ನೋಡಿ । ಬಂದು ಓಡಿ । ಕೊಟ್ಟನೆರಡು ಗುದ್ದು ॥ ೩ ॥
ಹಳ್ಳಿ ರೈತ ಐತ । ಬೆಳೆಸಿ ಬಹಳ ಭತ್ತ ।
ಅದನು ಕುಟ್ಟಿ । ಮುಡಿಯು ಕಟ್ಟಿ । ಕೆಲವ ಧನಿಗೆ ಇತ್ತ ॥ ೪ ॥

ಗಾಂಧಿಯ ಗುಣಗಳ ಹಾಡುವೆವು!

ಗಾಂಧಿಯ ಗುಣಗಳ ಹಾಡುವೆವು ।
ಗಾಂಧಿಯ ತೆರದಲಿ ನಡೆಯುವೆವು ॥ ಪಲ್ಲ ॥

ಸತ್ಯಾಹಿಂಸಾವ್ರತ ಧರಿಸಿ । ಕಷ್ಟಪರಂಪರೆಗಳ ವಹಿಸಿ ।
ದೀನರ ಸೇವೆಯ ತಾವಹಿಸಿ । ಚರಖದಿ ನೂಲನು ತೆಗೆಯುವೆವು ।
ಗಾಂಧಿಯ ಗುಣಗಳ ಹಾಡುವೆವು ॥ ೧ ॥

ಗೀತೆಯ ತತ್ವಗಳನು ತಿಳಿದು । ಮಾತೆಯ ಬಂಧನ ತೆಗೆದೊಗೆದು ।
ಹರಿಜನರೇಳಿಗೆಯನು ಬಗೆದು । ದೇಶದ ಹಿತವನು ಬಯಸುವೆವು ।
ಗಾಂಧಿಯ ಗುಣಗಳ ಹಾಡುವೆವು ॥ ೨ ॥

ಹಿಂದುಗಳೆಲ್ಲರು ಒಂದೆಂದು । ಚಂದದ ಬಾಳುವೆ ನಮಗೆಂದು ।
ಹಿಂದೂದೇಶವು ಮುಂದೆಂದು । ತಿಳಿಯುತ ಕೀರ್ತಿಯ ಗಳಿಸುವೆವು ।
ಗಾಂಧಿಯ ಗುಣಗಳ ಹಾಡುವೆವು ॥ ೩ ॥

ಮದ್ಯನಿಷೇಧ!

ಅಕ್ಕಂದಿರಣ್ಣಂದಿರೆಲ್ಲರು ಕೇಳಿ!
ಸಿಕ್ಕಿದ ಮದ್ಯವ ಕುಡಿಯದೆ ಬಾಳಿ! ॥ ಪಲ್ಲ ॥
ಸೇಂದಿ ಶರಾಬು ಸೇವಿಸಿದರೆ ನರನು
ಕುಂದುತ ಬರುತಲಿ ನಾಶವಾಗುವನು!
ಸತಿಸುತ ಮಿತ್ರರ ಗೋಳಾಡಿಸುತಲಿ
ಮಿತಿತಪ್ಪಿ ಕುಡಿದು ಬೀಳುವ ಮಾರ್ಗದಲ್ಲಿ! ॥
ದುಡಿತದ ಸಂಬಳ ಸಾಲದೆ ಬರಲು
ಕುಡಿತದ ಭ್ರಾಂತಿಯು ಹೆಚ್ಚಾಗುತಿರಲು:—
ಪ್ರೇಮದ ಪತ್ನಿಗೆ ಕಷ್ಟವ ಕೊಡುವ!
ನೇಮದ ಮಂಗಲಸೂತ್ರವ ಸೆಳೆವ!

ಕೈ ಬರಿದಾಗಲು ಪತ್ನೀಪುತ್ರರಿಗೆ
ಕೈಬಾಯಿಯೆನ್ನದೆ ಹೊಡೆವ ದೀನರಿಗೆ!
ಸುರೆಗಾಗಿ ಚೌರ್ಯವನೆಸಗುತ್ತಲವನು
ಸೆರೆಮನೆವಾಸವನನುಭವಿಸುವನು!
ಸರ್ವರ ನಿಂದೆಗೆ ಪಾತ್ರನಾಗುವನು!
ಸರ್ವಸಂಪದವನ್ನು ಕಳೆದುಕೊಳ್ಳುವನು!
ಸುರೆಯೆಂಬ ಭೂತಕ್ಕೆ ಬಲಿಯಾಗಬೇಡಿ!
ಸರಕಾರವಿದನೋಡಿಸಿಹುದೀಗ ನೋಡಿ!
ಅಕ್ಕಂದಿರಣ್ಣಂದಿರೆಲ್ಲರು ಕೇಳಿ!
ಸಿಕ್ಕಿದ ಮದ್ಯವ ಕುಡಿಯದೆ ಬಾಳಿ! ||

ಆಕಾಶದ ಉಯ್ಯಾಲೆ!

ನೋಡದೊ! ಗೆಳೆಯ! ಉಯ್ಯಾಲೆಯನು!
ದಿನವೂ ನೋಡಲು ಅದು ಸಿಗದು!
ನಾನಾ ಬಣ್ಣದಿ ಕೂಡಿದೆ! ನೋಡು!
ಮನಬಂದಾಗ ಕಾಣಿಸದು || ೧ ||

ಕೆಂಪು ಹಸುರು ಕಿತ್ತಳೆ ನೀಲ |
ಅರಸಿನ ಗುಲಾಬಿ ನೇರಳೆಯು |
ತರತರ ಬಣ್ಣದ ಕಾಮನ ಬಿಲ್ಲು
ನಯನನುಣುಪಾಗಿದೆ ಸುಂದರವು | || ೨ ||

ಮೋಡವು ಮುಂದೆ—ಸೂರ್ಯನು ಹಿಂದೆ |
ಇದಿರಲಿ ಬಿಲ್ಲು ತೂಗುತಿದೆ |
ನೇಸರ ಬಿಂಬವು ಪ್ರತಿಬಿಂಬಿಸಿದೆ |
ಲೋಕದ ಮನನ ಸೆಳೆಯುತಿದೆ || ೩ ||

ಕನ್ನಡ ರಾಜ್ಯೋದಯ (ಮಾರ್ಚಿಂಗ್ ಸೋಂಗ್)

ನಮ್ಮ ದೇಶ ಕನ್ನಡ! ನಮ್ಮ ಭಾಷೆ ಕನ್ನಡ!
ನಮ್ಮ ಮಾತೆ ಕನ್ನಡ! ನಮ್ಮ ಜನತೆ ಕನ್ನಡ!
ನಮ್ಮ ದೇಹ ಕನ್ನಡ!

ಇಂದಿನಿಂದ ನಮ್ಮ ನಾಡು ರಾಮರಾಜ್ಯವಾಯಿತು!
ಸುಂದರ ಸ್ವತಂತ್ರಪೂರ್ಣ ಸುಖದ ಸ್ವರ್ಗವಾಯಿತು!
ಶಾಂತಿಕಿರಣ ಹರಡಿತು!

ಕನ್ನಡಾಂಬೆ ಮಕ್ಕಳೆಲ್ಲ ವೀರರಾಗಿ ಮೆರೆವೆವು!
ಕನ್ನಡಿಗರ ಏಳ್ಗೆಗಾಗಿ ಕಷ್ಟಪಟ್ಟು ದುಡಿವೆವು!
ಕೀರ್ತಿಯನ್ನು ಪಡೆವೆವು!

ಚಂದಿರಮಾಮ!

ಚಂದಿರಮಾಮ! ಚಂದಿರಮಾಮ!
ತಂಪಿನ ಬೆಳಕನು ನೀಡುವ ಸೋಮ ॥ ಪಲ್ಲ ॥

ಮಿನುಗುವ ತಾರಾಮಧ್ಯದಲಿ । ಚಲಿಸುವ ಮೋಡಗಳೆಡೆಯಲ್ಲಿ ।
ಬೆಳ್ಳಿಯ ಚೆಂಡಿನ ತೆರದಲ್ಲಿ । ಹೊಳೆಯುತಲಿರುವನು ನಭದಲ್ಲಿ ॥ ೧ ॥

ಮಧ್ಯದಿ ಏನದು ತೋರುತಿದೆ? । ಗುಣಗಳ ಮಧ್ಯದಿ ದೋಷವಿದೆ ।
ಜನಕನು ಕೋಪದಿ ಎಸೆದಿರುವ । ಮೊಲವನು ಎದೆಯಲಿ ಹೊತ್ತಿರುವ ॥ ೨ ॥

ಜ್ಞಾನಿಗಳೆನ್ನುವರೀ ತೆರದೆ—"ಭೂಮಿಯ ನೆರಳು ಬಿಂಬಿಸಿದೆ!"
ಶೀತಲಕರಗಳ ಸುತ್ತಲು ಕರೆವ । ಲೋಕವ ನಗಿಸುತ ತಾನೂ ನಗುವ ॥ ೩ ॥

ಸೂರ್ಯೋದಯ



ಆಕಾಶವು ಕೆಂಬಣ್ಣದಿ ಕೂಡಿತು । ಸೂರ್ಯನ ಬಿಂಬವು ಕಾಣಿಸಿತು ॥
ತಾರೆಗಳೆಲ್ಲಾ ಓಡುವುವು । ಕಣ್ಣುಗಳೆಲ್ಲಾ ತೆರೆಯುವುವು ॥
ಪಕ್ಷಿಗಳೆಲ್ಲಾ ಹಾಡುವುವು । ಪರಮಾನಂದವ ನೀಡುವುವು ॥
ಹೊಂಬಿಸಿಲೆಲ್ಲಾ ಹರಡುತಿದೆ । ಮಗುವಿನ ನಿದ್ದೆಯು ಓಡುತಿದೆ ॥
ದನಗಳು ಹುಲ್ಲನು ಮೇಯುವುವು । ಕೋಳಿಗಳೆಲ್ಲವು ಕುಟುಕುವುವು ।
ರೈತನು ಗದ್ದೆಯನುಳುತಿಹನು । ರಂಗನು ಶಾಲೆಗೆ ಹೊರಡುವನು ॥

ಬಂತೈ! ಬಂತೈ! ದೀಪಾವಳಿಯು!

ಬಂತೈ! ಬಂತೈ! ದೀಪಾವಳಿಯು!
ಬಂತೈ! ಬಂತೈ! ಆಟದ ಹೋಳಿಯು!
ಎಲ್ಲಾ ಮನೆಗಳು ದೀಪದ ಝುರಿಗಳು!
ಎಲ್ಲಾ ಮಕ್ಕಳು ನಗೆ ನಗೆ ಹೂಗಳು!

ಹೊಸ ಹೊಸ ವೇಷವ ಹಾಕುವರು!
ಹೊಸ ಹೊಸ ತಿಂಡಿಯ ತಿನ್ನುವರು!
ಅಣ್ಣನು ತಮ್ಮನು ಕೈ ಕೈ ಹಿಡಿದು
ಅಕ್ಕನು ತಂಗಿಯು ಮೈ ಮೈ ನೇದು

ಕೇಕೇ ಹಾಕಿ ಹುಟ್ಸಿ ಪಟಾಕಿ
ಬಗೆ ಬಗೆ ತಿಂಡಿ ತಿನುತ ಭಂಡಿ
ಸಂತಸ ಪಡುವುದು ಬಾಲಾವಳಿಯು!
ಬಂತೈ! ಬಂತೆ! ದೀಪಾವಳಿಯು!

ಕಂದನ ಕರ್ತವ್ಯ

ತಂದೆ ತಾಯ್ಗಳ ಸೇವೆ ಮಾಡುವ । ಕಂದನವನೇ ಶ್ರೇಷ್ಠನು ।
ನಿಂದೆ ಬಾರದ ತೆರದಿ ಕೆಲಸವ । ಮಾಡುವವನೇ ಇಷ್ಟನು ॥
ಮರ್ಮಭೇದಕ ಕಠಿನ ವಚನಗ । ಳನ್ನು ಹೇಳದೆ ನಿತ್ಯವು ।
ಧರ್ಮದಿಂದಲಿ ಹಿತದ ವಚನವ- । ನಾಡುತಿರುವುದು ಸ್ತುತ್ಯವು ।
ಪರರ ದುಃಖವ ಹೋಗಲಾಡಿಸಿ । ಸುಖವ ತೋರುವ ಬಾಲನು ।
ಪರರಿಗುಪಕಾರವನು ಗೈವಾ- । ತನೆ ವಿಶಾಲಮನಸ್ಕನು ॥
ಜಾತಿ ಕುಲಗಳ ಗರ್ವ ತಾಳದೆ । ನೀತಿ ಗುಣಗಳ ತೋರುತ ।
ಪ್ರೀತಿಯಿಂದಲಿ ಸರ್ವರನು ಸ- । ನ್ಮಾನಿಸುವುದತಿಶಯ ಹಿತ ॥
ಯೋಗ್ಯಗುರುಗಳ ಮುಖದಿ ವಿದ್ಯೆಯ । ಪಡೆದು ಸಕಲವ ತಿಳಿಯುತ ।
"ಭಾಗ್ಯವನು ನೀಡೆಂ"ದು ದೇವನ । ಭಜಿಸಿ ಸುಖಿವುದು ಸಂತತ ॥

ಜೇನು ಹನಿಗಳು!

ಚಿಕ್ಕ ಹುಡುಗ ರಂಗ ! ಸಿಕ್ಕಿ ದುರುಳ ಸಂಗ ।
ಪೋಲಿ ಅಲೆದು । ಮಾನ ಕಳೆದು ।
ಎನಿಸಿಕೊಂಡ 'ಮಂಗ!' ॥ ೧ ॥

ರಾತ್ರಿಯ ಬಯಲಾಟ । ಜನರಿಗೆಲ್ಲ ಓಟ ।
ಕಳೆದು ಇರುಳು । ಆಗೆ ಹಗಲು ।
ನಿದ್ರೆಯದೆ ಕಾಟ । ॥ ೨ ॥

ಗೂಡಿನಲ್ಲಿ ಗಿಳಿ । ಮಾಡುತಿತ್ತು ಉಲಿ ।
ಅದನು ಕೇಳಿ । ಮುದವ ತಾಳಿ ।
ಕಂದ ನಕ್ಕ ಕಿಲಿ! ॥ ೩ ॥

ಚಿಕ್ಕ ಹುಡುಗ ರಘು । ಮೆಣಸು ತಿಂಬ ಬಿಗು ।
ಅಂಕೆಗಳನು । ಹೇಳುತಿಹನು— ।
"ಒಂದು ಎಗಡು ಮೂಗು!" ॥ ೪ ॥

ತಮ್ಮ ಕೆಲಸ

ಆಕಾಶದಲಿ ಬೆಳಗುವ ಸೂರ್ಯನು,
ಕಣ್ಣಿಗೆ ತಂಪನು ನೀಡುವ ಚಂದ್ರನು,
'ಸುಯ್ ಸುಯ್' ಎನ್ನುತ ಬೀಸುವ ಗಾಳಿಯು,—
ತಮ್ಮ ಕೆಲಸವನೆಂದಿಗು ಬಿಡರು!
ಪರ್ವತದಡಿಯಲಿ ಒಸರುವ ಬುಗ್ಗೆಯು,
ಕಲಕಲ ಮಾಡುತ ಹರಿಯುವ ಹೊಳೆಯು,
ಬಿತ್ತಿದ ಬೆಳೆಯನು ನೀಡುವ ಭೂಮಿಯು,—
ತಮ್ಮ ಕೆಲಸವನ್ನೆಂದಿಗೂ ಬಿಡರು!
ಕೆಲಸವ ಮಾಡುವ ಅಪ್ಪನು, ಅಮ್ಮನು,
ಪುಸ್ತಕ ಓದುವ ಅಣ್ಣನು, ಅಕ್ಕನು,
ಶಾಲೆಗೆ ಹೋಗುವ ತಮ್ಮನು, ತಂಗಿಯು,—
ತಮ್ಮ ಕೆಲಸವನ್ನೆಂದಿಗು ಬಿಡರು!

ಒಂದೇ ನಮಗೆಲ್ಲರಿಗಾಕಾಶ

ಒಂದೇ ನಮಗೆಲ್ಲರಿಕಾಶ ।
ನಾವೆಯೊಂದರಲಿ ನಮ್ಮಯ ವಾಸ ।
ಒಂದೇ ದೀಪವು ನಮಗಾಗಿಹುದು ।
ಒಂದೇ ಹಾಸಿಗೆ ನಮಗಿರುತಿಹುದು]
ಕಷ್ಟ ಸುಖಗಳಾ ಕಾರಣವೊಂದೇ ।
ಪಾಪಪುಣ್ಯಗಳ ಫಲವಿಹುದೊಂದೇ ।
ನಮಗೆಲ್ಲರಿಗೂ ಒಬ್ಬನೇ ದೇವ ।
ನಮ್ಮಲ್ಲಿರುವುದು ಸೋದರಭಾವ ।

(ಹಿಂದಿಯಿಂದ)

ಪ್ರತಿ ವಾರವೂ ಕೊಂಡುಕೊಳ್ಳಿರಿ!

"ಒಂದಾಣೆ ಮಾಲೆ"ಯು ಪುಸ್ತಕಗಳು, ಪ್ರತಿ ವಾರ ಪ್ರಕಟವಾಗುತ್ತಿವೆ. ಹೊಸ ಹೊಸ ವಿಷಯಗಳ ಮೇಲೆ ಪುಸ್ತಕಗಳು ಹೊರಡುತ್ತಿವೆ. 1954ನೇ ಸಪ್ಟಂಬರದಿಂದ 1960ನೇ ಜೂನ್ ತಿಂಗಳ ನಾಲ್ಕನೆಯ ವಾರದ ವರೆಗೆ 277 ಪುಸ್ತಕಗಳು ಪ್ರಕಟವಾಗಿದ್ದು, ಇನ್ನೂ ಪ್ರತಿ ವಾರ ಒಂದೊಂದು ಹೊಸ ಪುಸ್ತಕವು ಹೊರಡುತ್ತಲೇ ಇದೆ.

277 ಆಣೆಗಳಿಗೆ 'ಒಂದಾಣೆ ಮಾಲೆ'ಯು, ಹೊದಿಕೆ ಕೂಡಿ, ಒಟ್ಟು 5834 ಪುಟಗಳನ್ನು ಕೊಟ್ಟಿರುತ್ತದೆ. ಇಷ್ಟು ಮೊಬಲಗಿಗೆ ಇಷ್ಟು ಪುಟಗಳನ್ನು ಬೇರೆ ಎಲ್ಲಿಯೂ ಯಾವ ಪ್ರಕಟಣೆಯೂ ಕೊಟ್ಟಿಲ್ಲ.

ವಿದ್ವಾಂಸರು ಮಾತ್ರ 'ಒಂದಾಣೆ ಮಾಲೆ'ಗೆ ಬರೆಯುತ್ತಾರೆ. 'ಅಶ್ಲೀಲ' ಎಂಬ ಅಂಶವೇ 'ಒಂದಾಣೆ ಮಾಲೆ'ಯ ಪ್ರಕಟಣೆಗಳಲ್ಲಿರುವುದಿಲ್ಲ.

'ಒಂದಾಣೆ ಮಾಲೆ' ಪುಸ್ತಕಗಳು ಚಿಕ್ಕ ವಿದ್ಯಾರ್ಥಿಗಳಿಂದ ವಯೋವೃದ್ಧರ ವರೆಗೆ, ಪ್ರತಿಯೊಬ್ಬನಿಗೂ ಅವಶ್ಯ ಇವೆ. ಇಷ್ಟು ಸುಲಭ ಬೆಲೆಯಲ್ಲಿ ಇಷ್ಟು ಉತ್ತಮ ಸಾಹಿತ್ಯವು, ಈ ಮೊದಲು ಎಲ್ಲಿಯೂ ಒದಗಿಸಲ್ಪಟ್ಟಿಲ್ಲ.

'ಒಂದಾಣೆ ಮಾಲೆ' ಪುಸ್ತಕಗಳನ್ನು ಟಪ್ಪಾಲು ದ್ವಾರಾ ತರಿಸಿಕೊಳ್ಳುವವರು ರೂ. 4—8—0ನ್ನು ಮನಿಯಾರ್ಡರ್ ಮೂಲಕ ಕಳಿಸತಕ್ಕದ್ದು. ಡಿಪಾಜಿಟ್ ಇಡುವವರು ಮಾತ್ರ ಏಜನ್ಸಿಗಾಗಿ ಬರೆದುಕೊಳ್ಳತಕ್ಕದ್ದು.

ವಾರಕ್ಕೆ ಕೇವಲ ಒಂದಾಣೆ ವ್ಯಯದಿಂದ ಒಂದು ಉತ್ಕೃಷ್ಟ—ಉಪಯುಕ್ತ ಪುಸ್ತಕವನ್ನು ಹೊಂದುವ ಈ ಯೋಜನೆಯ ಸದುಪಯೋಗ ಮಾಡಿಕೊಳ್ಳಿರಿ.

ಒಂದಾಣೆ ಮಾಲೆ, ಪ್ರಭಾತ ಆಫೀಸು, ರಥಬೀದಿ,
ಮಂಗಳೂರು-1.

ANNA PUBLICATIONS, CAR STREET, MANGALORE-1.

Edited, Printed & Published by K. V. Shenoy
at The Prabhat Printers Ltd., Mangalore.